# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 630 |
| ಸದಸ್ಯರ ಹೆಸರು | : | ಶ್ರೀ.ಅರವಿಂದಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 16.09.2021 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ ಜಿಲ್ಲೆಯ ಕಾರಂಜಾ ಜಲಾಶಯ ಯೋಜನೆಯ ಕಾಮಗಾರಿಯು ಪ್ರಾರಂಭಗೊಂಡಿದ್ದು ಯಾವಾಗ; ಈ ಯೋಜನೆ ಪೂರ್ಣಗೊಂಡಿದೆಯೇ; ಪೂರ್ಣಗೊಳ್ಳದಿದ್ದಲ್ಲಿ ಕಾರಣವೇನು; | ಕಾರಂಜಾ ಯೋಜನೆಯು ಬರ ಪರಿಹಾರ ಕಾಮಗಾರಿಯಾಗಿ 1969-70 ರಲ್ಲಿ ಪ್ರಾರಂಭಗೊಂಡಿರುತ್ತದೆ. ಈ ಯೋಜನೆಯು ಮುಕ್ತಾಯಗೊಳ್ಳುವ ಹಂತದಲ್ಲಿರುತ್ತದೆ.<br>ಕಾರಂಜಾ ಯೋಜನೆಗೆ ರೂ.9.90 ಕೋಟಿಗಳಿಗೆ 1969ರಲ್ಲಿ ಸರ್ಕಾರ ಅನುಮೋದನೆ ನೀಡಲಾಗಿರುತ್ತದೆ. ಪ್ರಾರಂಭಿಕವಾಗಿ ಅಣೆಕಟ್ಟು, ಬಲದಂಡೆ ಹಾಗೂ ಎಡದಂಡೆ ಕಾಲುವೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ.<br><br>ಆದರೆ 1974-75 ರಲ್ಲಿ ಕಾರಂಜಾ ಏತ ನೀರಾವರಿ ಯೋಜನೆಯನ್ನು ಸೇರ್ಪಡಿಸಲಾಗಿದೆ. ತದನಂತರ ಬಲದಂಡೆ ಕಾಲುವೆಯ ತುದಿಗಾಲುವೆ ವಿತರಣಾ ಕಾಲುವೆ ಸಂ:107, ಅತಿವಾಳ ಏತ ನೀರಾವರಿ ಯೋಜನೆ ಹಾಗೂ ಕಾರಂಜಾ ಏತ ನೀರಾವರಿ ಯೋಜನೆಯ ವಿತರಣಾ ಕಾಲುವೆ ಸಂ: D1(A) ಗಳನ್ನು ಸದರಿ ಯೋಜನೆಗೆ ಸೇರ್ಪಡೆಗೊಳಿಸಲಾಗಿದೆ.<br>1987-88 ಸಾಲಿನ ದರಪಟ್ಟಿಯಂತೆ ರೂ.98.00 ಕೋಟಿಯ ಪರಿಷ್ಕೃತ ಅಂದಾಜಿಗೆ 1992ರಲ್ಲಿ ಕೇಂದ್ರ ಜಲ ಆಯೋಗ ( CWC) ದಿಂದ ಒಪ್ಪಿಗೆ ಪಡೆಯಲಾಗಿರುತ್ತದೆ.<br><br>ಮುಂದುವರೆದು, 2012-13 ದರ ಪಟ್ಟಿಯಂತೆ ಪರಿಷ್ಕೃತ ಅಂದಾಜು ಪಟ್ಟಿ ರೂ:635.18 ಕೋಟಿಗಳಿಗೆ CWC ಯಿಂದ ಒಪ್ಪಿಗೆ ಪಡೆದು, 2015ರಲ್ಲಿ ಸರ್ಕಾರದ ಆದೇಶ ಹೊರಡಿಸಲಾಗಿರುತ್ತದೆ.<br><br>2018-19ನೇ ಸಾಲಿನ ದರ ಪಟ್ಟಿಯಂತೆ ಯೋಜನೆಯ ಮರು ಪರಿಷ್ಕೃತ ಅಂದಾಜು ಪಟ್ಟಿಯು ನಿಗಮದ ತಯಾರಿಕಾಹಂತದಲ್ಲಿರುತ್ತದೆ ಹಾಗೂ ಭೂಸ್ವಾಧೀನ ಪ್ರಕ್ರಿಯೆ ವಿಳಂಬದಿಂದ ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ. |
| ಆ) | ಈ ಯೋಜನೆ ಪೂರ್ಣಗೊಳಿಸಲು ಯಾವ ಕಾಲಮಿತಿಯಲ್ಲಿ ನಿಗಧಿಗೊಳಿಸಲಾಗಿತ್ತು; | ಸದರಿ ಯೋಜನೆಯನ್ನು ಮಾರ್ಚ-2021ರ ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿತ್ತು, ಆದರೆ, ಕೋವಿಡ್-19 ಹರಡುವಿಕೆಯಿಂದ ಕಾಮಗಾರಿಗಳನ್ನು ಕೈಗೊಳ್ಳುವುದರಲ್ಲಿ ವಿಳಂಬವಾಗಿದ್ದು, ಮಾರ್ಚ-2022ರ ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. |

| | | |
|---|---|---|
| ಇ) | ಪ್ರಾರಂಭದಲ್ಲಿ ಈ ಯೋಜನೆಗೆ ಎಷ್ಟು ಮೊತ್ತ ಮಂಜೂರು ಮಾಡಲಾಗಿತ್ತು; ಇಲ್ಲಿಯವರೆಗೆ ಖರ್ಚಾದ ಮೊತ್ತ ಎಷ್ಟು; ಹಾಗೂ ಇನ್ನೂ ಬಾಕಿ ಉಳಿದ ಕಾಮಗಾರಿಗೆ ಎಷ್ಟು ಹಣ ಬೇಕಾಗಬಹುದು; | ಪ್ರಾರಂಭದಲ್ಲಿ ಈ ಯೋಜನೆಗೆ ರೂ.9.90 ಕೋಟಿಗಳಿಗೆ 1969ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ಯೋಜನೆಯು 2012-13 ದರ ಪಟ್ಟಿಯಂತೆ ರೂ.635.18 ಕೋಟಿಗಳಿಗೆ ಪರಿಷ್ಕರಿಸಿ, 2015ರಲ್ಲಿ ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ. ಯೋಜನೆಗೆ ಇಲ್ಲಿಯವರೆಗೆ ರೂ.730.74 ಕೋಟಿಗಳು ಖರ್ಚಾಗಿದ್ದು, ಪೂರ್ಣಗೊಳಿಸಲು ರೂ. 176.43 ಕೋಟಿ ಮೊತ್ತದ ಅವಶ್ಯಕತೆ ಇರುವುದಾಗಿ ಅಂದಾಜಿಸಲಾಗಿದೆ. |
| ಈ) | ಕಾರಂಜ ಮುಳುಗಡೆ ಪ್ರದೇಶದ ರೈತರೆಷ್ಟು; ಹಾಗೂ ಮುಳುಗಡೆ ಪ್ರದೇಶದಲ್ಲಿ ಭೂಸ್ವಾಧೀನ ಮಾಡಿಕೊಂಡಿರುವ ಭೂಮಿ ಎಷ್ಟು? | ಕಾರಂಜಾ ಯೋಜನೆಯ ಹಿನ್ನೀರಿನಿಂದ ಮುಳುಗಡೆಯಾದ ರೈತರ 3368 ಸರ್ವೆ ನಂ.ಗಳ 15,522 ಎಕರೆ 25 ಗುಂಟೆ ಜಮೀನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ. ಉಳಿದ 277 ಸರ್ವೆ ನಂ.ಗಳ 535 ಎಕರೆ 20 ಗುಂಟೆ ರೈತರ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |

ಸಂಖ್ಯೆ:ಜಸಂಇ 135 ಎಂಎಲ್ಎ 2021

(ಗೋವಿಂದ ಎಂ.ಕಾರಜೋಳ)
ಜಲಸಂಪನ್ಮೂಲ ಸಚಿವರು.